# ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 10-1-2018

**ಪ್ರಕಟಣೆಯ ಕೃಪೆಗಾಗಿ**

**ವಿಶ್ವಕ್ಕೆ ಭಾರತ ಧಾರ್ಮಿಕ ಗುರುವೆಂದು ಅರಿವು ಮೂಡಿಸಿದವರು ಸ್ವಾಮಿ ವಿವೇಕಾನಂದರು - ಪ್ರೊ. ಉಮೇಶ**

ಕೊಳ್ಳೇಗಾಲ 10-01-2018 : ಸ್ವಾರ್ಥ ತ್ಯೆಜಿಸಿ ನಿಸ್ವಾರ್ಥ ಬುದ್ಧಿಯಿಂದ ಜಗತ್ತಿನ ಹಲವೆಡೆ ಭಾಷಣ ಮಾಡಿ ವಿಶ್ವಕ್ಕೆ ಭಾರತ ಧಾರ್ಮಿಕ ಗುರು ಎಂದು ಅರಿವು ಮೂಡಿಸಿದ ವಿವೇಕಾನಂದರು ವಿಶ್ವ ವಿಜೇತರು ಎಂದು ಪ್ರಾಚಾರ್ಯ ಪ್ರೊ. ಉಮೇಶ ತಿಳಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ವತಿಯಿಂದ ಸ್ವಾಮಿ ವಿವೇಕಾನಂದರ 155ನೆಯ ಜನ್ಮ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ವಿವೇಕಾನಂದರ ಕುರಿತ ಪುಸ್ತಕಗಳು ಮತ್ತು ಭಾವಚಿತ್ರಗಳ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದರು.

ಇಂದಿಗೂ ಯುವ ಜನರ ಸ್ಪೂರ್ತಿಯಾದ ವಿವೇಕಾನಂದರು ಕೇವಲ ಧಾರ್ಮಿಕ ಸನ್ಯಾಸಿಯಾಗದೆ ದೇಶ ಪ್ರೇಮ ಉಕ್ಕಿ ಹರಿಯುವಂತೆ ಮಾಡಿದವರು. ವಿದ್ಯಾರ್ಥಿಯಾಗಿದ್ದಾಗ ಇವರ ಅಸಾಧಾರಣ ಬುದ್ಧಿ ಮತ್ತೆ ಕಂಡು ಪ್ರಾಂಶುಪಾಲರು ಪರಮಾಶ್ಚರ್ಯಗೊಳ್ಳುತ್ತಾರೆ. ಅಂದು ಪ್ರಾಂಶುಪಾಲರು ಊಹಿಸಿದಂತೆ ವಿವೇಕಾನಂದರು ಅತ್ಯಂತ ಮೇಧಾವಿಯಾದವರು. ಪರಮಾತ್ಮನಂತೆ ವಿಶ್ವಕ್ಕೆ ಮಾರ್ಗದರ್ಶನ ಮಾಡುವ ಮಹಾನ್ ಸಾರಥಿಯಾಗುವಂತೆ ತಾಯಿಯಿಂದ ಆಶೀರ್ವಾದ ಪಡೆದ ಇವರು ತಾಯಿಯ ಆಶಯದಂತೆಯೇ ಉಳಿದರು. ಇಂತಹ ದಿವ್ಯ ಚೈತನ್ಯ ಕುರಿತಾದ ಪುಸ್ತಕಗಳು ಹಾಗೂ ಭಾವಚಿತ್ರಗಳ ಪ್ರದರ್ಶನ ಮಾಡಿ ವಿದ್ಯಾರ್ಥಿಗಳಲ್ಲಿ ವಿವೇಕಾನಂದರ ಆದರ್ಶ, ದೇಶ ಪ್ರೇಮವನ್ನು ಅರಿವು ಮೂಡಿಸುತ್ತಿರುವುದು ಪಠ್ಯ ಹಾಗೂ ಪಠ್ಯೇತರ ವಿಷಯಗಳ ಬೋಧನೆಗಿಂತ ಮಿಗಿಲಾದದ್ದು ಎಂದು ಅಭಿಪ್ರಾಯಿಸಿದರು.

ನರ್ಸಿಂಗ್ ಶಾಲೆ ಪ್ರಾಚಾರ್ಯ ಶ್ರೀ ವಿಷಕಂಠಮೂರ್ತಿ, ಪದವಿಪೂರ್ವ ಕಾಲೇಜು ಪ್ರಾಚಾರ್ಯ ಶ್ರೀ ಮಹದೇವಸ್ವಾಮಿ, ಅಧ್ಯಾಪಕರು ಹಾಗೂ ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಪ್ರಾಚಾರ್ಯರು
ಜೆಎಸ್‌ಎಸ್ ಮಹಿಳಾ ಕಾಲೇಜು
ಕೊಳ್ಳೇಗಾಲ



